# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್–ಸಂಖ್ಯೆ 129 ರಲ್ಲಿ ದಿನಾಂಕ:20.09.2021 ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು .**

ದಿನಾಂಕ: 20.09.2021 ರಂದು ವಾರ್ಡ್ ಸಂಖ್ಯೆ 129ರ ಸೆಪ್ಟೆಂಬರ್ ಮಾಹೆಯ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ:129 ರ ವಾರ್ಡ್ ಕಛೇರಿಯಲ್ಲಿ [illegible] ನಡೆಸಲಾಯಿತು. ಈ ಕೆಳಕಂಡಂತೆ ಸದಸ್ಯರು / ಸಾರ್ವಜನಿಕರು ಭಾಗವಹಿಸಿರುತ್ತಾರೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀ.ಜೆ.ವಿಶ್ವನಾಥ್, ಅಧೀಕ್ಷಕ ಅಭಿಯಂತರರು (ದಾಸರಹಳ್ಳಿ ವಲಯ) ಹಾಗೂ ವಾರ್ಡ್ 129 ನೋಡಲ್ ಅಧಿಕಾರಿಗಳು
2. ಶ್ರೀ.ಬಾಲರಾಜ್, ಮಾರ್ಷಲ್ ವಾರ್ಡ್–129
3. ಶ್ರೀ.ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಘನತ್ಯಾಜ್ಯನಿರ್ವಹಣೆ–ರಾ.ರಾ.ನಗರ.
4. ಸಹಾಯಕ ಅಭಿಯಂತರರು ಶ್ರೀ. ಸಿದ್ಧರಾಮಯ್ಯ ರವರು ಹಾಜರಿರುವುದಿಲ್ಲ.
5. ಶ್ರೀ.ವಿಜಯ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–129 'ಎ' ಹಾಜರಿರುವುದಿಲ್ಲ.
6. ಶ್ರೀಮತಿ.ಅನಿತಾ, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–129 'ಬಿ' ಹಾಜರಿರುತ್ತಾರೆ.
7. ಶ್ರೀಮತಿ.ಶೋಭ ಭಟ್, ಸ್ಥಳಿಯ ನಿವಾಸಿ, 3ನೇ ಮುಖ್ಯ ರಸ್ತೆ, ಅನ್ನಪೂರ್ಣೇಶ್ವರಿನಗರ, ವಾರ್ಡ್ –129
8. ಶ್ರೀ.ಪಿ.ಉಡುಪ, ಸ್ಥಳಿಯ ನಿವಾಸಿ, 3ನೇ ಮುಖ್ಯ ರಸ್ತೆ, ಅನ್ನಪೂರ್ಣೇಶ್ವರಿನಗರ, ವಾರ್ಡ್ –129
9. ವಾರ್ಡ್ ಸಂಖ್ಯೆ:129ರ ಇತರೆ ಬಡಾವಣೆಯ ಸ್ಥಳೀಯ ನಿವಾಸಿಗಳು.
10. ಶ್ರೀ.ನರಸಿಂಹಮೂರ್ತಿ ಸದಸ್ಯ ಕಾರ್ಯದರ್ಶಿಗಳು ರವರ ಪರವಾಗಿ ಹನುಮಂತರಾಜು ವಾರ್ಡ್ 129

ಸದರಿ ವಾರ್ಡ್ ಸಮಿತಿ ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತ ಕೋರುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಸದರಿ ಸಭೆಯಲ್ಲಿ ಮುಖ್ಯವಾಗಿ ದಿನಾಂಕ:25.08.2021 ರಂದು ಟೌನ್ ಹಾಲಿನಲ್ಲಿ ಮುಖ್ಯ ಆಯುಕ್ತರು ಬಿಬಿಎಂಪಿ ರವರಿಂದ "ನಾಗರೀಕರ ಸಹಭಾಗಿತ್ವ ಕಾರ್ಯಕ್ರಮ" ಚಾಲನೆ ನೀಡಲಾಗಿರುವ ಬಗ್ಗೆ ರಾ.ರಾ.ನಗರ ವಲಯದ Zonal co-ordinator ಆಗಿರುವ ಬಗ್ಗೆ ಶ್ರೀಮತಿ.ಶೋಭ ಭಟ್, ರವರು ಸದರಿ ಕಾರ್ಯಕ್ರಮದ ಬಗ್ಗೆ ವಿಸ್ತಾರವಾಗಿ ಎಲ್ಲರಿಗೂ ವಿವರಿಸಲಾಗಿದ್ದು, ತತ್ಸಂಬಂಧ ಸದರಿ ಸಹಭಾಗಿತ್ವದಲ್ಲಿ ಸ್ವಯಂ ಸೇವಕರಾಗಿ ಸೇವೆಯನ್ನು ನೀಡಲು ಇಚ್ಛಿಸುವವರು ಅವರ ಮಾಹಿತಿಯನ್ನು ವಾರ್ಡ್ 129 ರ ವಾಟ್ಸ್ ಆಪ್ ಗ್ರೂಪ್ ನಲ್ಲಿ ತಿಳಿಸಬೇಕೆಂದು ತಿಳಿಸಿದರು.

ಸದರಿ ಸಭೆಯಲ್ಲಿ ಮುಖ್ಯವಾಗಿ ವಾರ್ಡ್ ಸಂಖ್ಯೆ:129ರಲ್ಲಿ ಘನತ್ಯಾಜ್ಯನಿರ್ವಹಣೆಗೆ ಸಂಬಂಧಪಟ್ಟಂತೆ ಅನೇಕ ದೂರುಗಳನ್ನು ಸ್ವೀಕರಿಸುತ್ತಿರುವ ಹಿನ್ನಲೆಯಲ್ಲಿ ಸಂಬಂಧಪಟ್ಟ ಸ.ಕಾ.ನಿ.ಅ ಹಾಗೂ ಕಿರಿಯ ಆರೋಗ್ಯ ಪರೀವಿಕ್ಷಕರವರಲ್ಲಿ ಸದರಿ ವಾರ್ಡಿಗೆ ಸಂಬಂಧಿಸಿದಂತೆ, ನಿಯೋಜಿಸಲಾಗಿರುವ ಆಟೋ ಟಿಪ್ಪರ್‌ಗಳು/ಕಾಂಪ್ಯಾಕ್ಟರ್‌ಗಳು ಮತ್ತು ಒಣತ್ಯಾಜ್ಯ ಸಂಗ್ರಹಣೆಗೆ ಪ್ರತ್ಯೇಕವಾಗಿ ನಿಯೋಜಿಸಿರುವ ವಾಹನಗಳ ಬಗ್ಗೆ ಸಂಪೂರ್ಣ ವಿವರವನ್ನು ನೀಡಲು ಕೋರಲಾಗಿ ಅದರಂತೆ ಸಭೆಗೆ ಎಲ್ಲಾ ಮಾಹಿತಿಯನ್ನು ನೀಡಿದರು ಹಾಗೂ ಸಮರ್ಪಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಚರ್ಚಿಸಲಾಗಿರುತ್ತದೆ.

1. ವಾರ್ಡ್ ಸಂಖ್ಯೆ :129ರಲ್ಲಿ 750 ಮನೆಗಳಿಗೆ ಒಂದು ಬ್ಲಾಕ್‌ರಂತೆ ವಿಂಗಡಿಸಲಾಗಿ ಒಟ್ಟು 71 ಬ್ಲಾಕ್‌ಗಳು ಇದ್ದು, ಎಲ್ಲಾ ಬ್ಲಾಕ್‌ಗಳಿಗೆ ಆಟೋ ಟಿಪ್ಪರ್‌ಗಳನ್ನು ನಿಯೋಜಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.
2. ಎಲ್ಲಾ ಬ್ಲಾಕ್‌ಗಳಲ್ಲಿ ಒಣತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ಶ್ರೀ.ಶಕ್ತಿ ಗುಂಪುಗಳ ವತಿಯಿಂದ ನಾಲ್ಕು ಚಕ್ರದ ಲಘು ವಾಹನವನ್ನು ನಿಯೋಜಿಸಿಕೊಂಡು ಒಣತ್ಯಾಜ್ಯವನ್ನು ಸಂಗ್ರಹಿಸಲಾಗುತ್ತಿರುವುದಾಗಿ ತಿಳಿಸಿರುತ್ತಾರೆ.

3. ಸದರಿ ವಾರ್ಡ್‌ನಲ್ಲಿ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರ ಕಟ್ಟಡವು ಲಭ್ಯವಿಲ್ಲದಿರುವುದರಿಂದ ಕೇಂದ್ರ ಕಛೇರಿಯಿಂದ ಕಾರ್ಯಾದೇಶವನ್ನು ಪಡೆದು ಕಟ್ಟಡದ ಕಾಮಗಾರಿಯು ಪ್ರಾರಂಭಿಸಿರುವುದಾಗಿ ತಿಳಿಸಿರುತ್ತಾರೆ.
4. ಸದರಿ ವಾರ್ಡ್‌ನಲ್ಲಿ ಲಭ್ಯವಿರುವ ಲಿಂಕ್ ವರ್ಕರ್ಸ್ ಮತ್ತು ಮಾರ್ಷೆಲ್ಸ್ ರವರನ್ನು ನಿಯೋಜಿಸಿ ತ್ಯಾಜ್ಯ ವಿಂಗಡನೆಗೆ ಹಾಗೂ ಪ್ರತ್ಯೇಕವಾಗಿ ಹಸಿತ್ಯಾಜ್ಯ ಮತ್ತು ಒಣತ್ಯಾಜ್ಯ ನೀಡಲು ಜಾಗೃತಿಯನ್ನು ನೀಡಲಾಗುತ್ತಿರುತ್ತದೆ ಎಂದು ವರದಿಸಿರುತ್ತಾರೆ.
5. ಎಲ್ಲಾ ಆಟೋ ಟಿಪ್ಪರ್‌ಗಳು ಬ್ಲಾಕಿನಲ್ಲಿ ಮನೆ ಮನೆಯಿಂದ ಕಸವನ್ನು ಸಂಗ್ರಹಿಸಲು ರೂಟ್ ಮ್ಯಾಪಿಂಗ್ ಮಾಡಲಾಗಿದ್ದು (75% ಪೂರ್ಣಗೊಂಡಿರುತ್ತದೆ) ಉಳಿದ ಬ್ಲಾಕ್‌ಗಳ ರೂಟ್ ಮ್ಯಾಪಿಂಗ್ ಅನ್ನು ಮಾಡಲಾಗುತ್ತಿದೆ ಎಂದು ವರದಿಸಿರುತ್ತಾರೆ.
6. ಪ್ರತಿ ರಸ್ತೆಗೆ ಪೌರ ಕಾರ್ಮಿಕರನ್ನು ನಿಯೋಜಿಸಲು ಪೌರ ಕಾರ್ಮಿಕರ ಕೊರತೆ ಇರುವುದಾಗಿ ಹಾಗೂ ಲಭ್ಯವಿರುವ ಪೌರಕಾರ್ಮಿಕರನ್ನು ಎಲ್ಲಾ ಬ್ಲಾಕ್‌ಗಳಲ್ಲಿ ನಿಯೋಜಿಸಿರುವುದಾಗಿ ವರದಿಸಿರುತ್ತಾರೆ.
7. ನಿಯೋಜಿಸಿರುವ ಶೇಕಡ 75% ರಷ್ಟು ಆಟೋ ಟಿಪ್ಪರ್‌ಗಳಿಗೆ ಜಿಪಿಎಸ್ ಸಾಧನವನ್ನು ಅಳವಡಿಸಿರುವುದಾಗಿ ಸಭೆಯಲ್ಲಿ ವರದಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಲಾಗಿ ಮುಖ್ಯವಾಗಿ ಆಟೋ ಟಿಪ್ಪರ್‌ಗಳ ರೂಟ್ ಮ್ಯಾಪಿಂಗ್ ಎಲ್ಲಾ ಬ್ಲಾಕ್‌ಗಳಲ್ಲಿ ಪೂರ್ಣಗೊಳಿಸಲು ಹಾಗೂ (ಶೇಕಡ 100% ರಷ್ಟು) ಜಿಪಿಎಸ್ ಸಾಧನವನ್ನು ಎಲ್ಲಾ ವಾಹನಗಳಿಗೆ ಅಳವಡಿಸಿ ಲಭ್ಯವಿರುವ Fleet Management System ರನ್ವಯ ಎಲ್ಲಾ ರಸ್ತೆಗಳಲ್ಲಿನ ಮನೆ ಮನೆಯಿಂದ ಕಸವನ್ನು ಸಂಗ್ರಹಿಸಲು ಕ್ರಮವಹಿಸಬೇಕೆಂದು ಹಾಗೂ ಎಲ್ಲಾ ಬ್ಲಾಕ್ ಮ್ಯಾಪಿನೊಂದಿಗೆ ನಿಯೋಜಿಸಿರುವ ವಾಹನಗಳ ಸಂಖ್ಯೆಯನ್ನು ಹಾಗೂ ಎಲ್ಲಾ ಬ್ಲಾಕಿಗೆ ನಿಯೋಜಿಸಿರುವ ಮೇಲ್ವಿಚಾರಕರ ದೂರವಾಣಿ ಸಂಖ್ಯೆಯೊಂದಿಗೆ ಮುಂದಿನ ಸಭೆಯಲ್ಲಿ ಮಾಹಿತಿಯನ್ನು ನೀಡಲು ಸಭೆಯಲ್ಲಿ ಸಕಾನಿಅ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಗಿರುತ್ತದೆ. ಮತ್ತು ಎಲ್ಲಾ ಬಡಾವಣೆಗಳಲ್ಲಿ ಉದ್ಭವಾಗುವ ಬ್ಲಾಕ್‌ಸ್ಪಾಟ್ಸ್ ಆದ್ಯತೆ ಮೇರೆಗೆ ತೆರವುಗೊಳಿಸಲು ಹಾಗೂ ಸದರಿ ಬ್ಲಾಕ್‌ಸ್ಪಾಟ್ಸ್ ಮರುಕಳಿಸದಂತೆ ಕ್ರಮವಹಿಸಬೇಕೆಂದು ಸೂಚಿಸಲಾಗಿದೆ.

ಇಂದಿನ ಸಭೆಯಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ, ಎಲ್ಲಾ ಬಡಾವಣೆಗಳಿಂದಲ್ಲೂ ಅನೇಕ ದೂರುಗಳು ಬರುತ್ತಿರುವ ಹಿನ್ನಲೆಯಲ್ಲಿ ಸಮರ್ಪಕವಾಗಿ ನಿರ್ವಹಿಸುವ ಸಂಬಂಧ ಸದರಿ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿದ್ದು, ಮುಂದಿನ ಸಭೆಯಲ್ಲಿ ಕೈಗೊಂಡ ಕ್ರಮದ ಬಗ್ಗೆ ಸಕಾನಿಅ ಘನತ್ಯಾಜ್ಯ ರವರು ಎಲ್ಲಾ ನಿವಾಸಿಗಳಿಗೆ ಮಾಹಿತಿಯನ್ನು ನೀಡಬೇಕೆಂದು ಸಭೆಯಲ್ಲಿ ಸೂಚಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಗೊಳಿಸಲಾಯಿತು.

(ಹಾಜರಾಗಿರುವುದಿಲ್ಲ)
ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129

ಪ್ರತಿಯನ್ನು:-

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
3. ಮುಖ್ಯ ಅಭಿಯಂತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
4. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.